Google AI



# ಚಾಟ್‌ಜಿಪಿಟಿ, ಬಾರ್ಡ್ ಜಿದ್ದಾಜಿದ್ದಿ

**ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಜಿದ್ದಿಗೆ ಬಿದ್ದಂತಹ ಪೈಪೋಟಿ. ಈಚೆಗಷ್ಟೇ ಗಮನ ಸೆಳೆದಿದ್ದ 'ಓಪನ್ ಐಎ' ಸ್ಟಾರ್ಟ್‌ಅಪ್‌ನ 'ಚಾಟ್‌ಜಿಪಿಟಿ'ಗೆ ಸಡ್ಡು ಹೊಡೆಯಲು ಗೂಗಲ್ ಕಂಪನಿಯು ಗೂಗಲ್ ಬಾರ್ಡ್ ಚಾಟ್‌ಬಾಟ್ ಪರಿಚಯಿಸಿದೆ. ಸದ್ಯ ಇವೆರಡೂ ಚಾಟ್‌ಬಾಟ್‌ಗಳ ನಡುವೆ ನಾನಾ? ನೀನಾ? ಅನ್ನುವ ಪೈಪೋಟಿ ಶುರುವಾಗಿದೆ.**

**■ ಶಶಿಕುಮಾರ್ ಸಿ.**

ಸ್ಯಾನ್‌ಫ್ರಾನ್ಸಿಸ್ಕೊ ಮೂಲದ 'ಓಪನ್ ಐಎ' ನವೋದ್ಯಮ ಕಂಪನಿಯು ಶುರು ಮಾಡಿರುವ 'ಚಾಟ್‌ಜಿಪಿಟಿ'ಗೆ ಹಲವು ಶತಕೋಟಿ ಡಾಲರ್‌ನಷ್ಟು ಬಂಡವಾಳ ಹೂಡಿಕೆ ಮಾಡುವುದಾಗಿ ಮೈಕ್ರೊಸಾಫ್ಟ್ ಹೇಳಿಕೆ ನೀಡಿದ ಎರಡು ವಾರಗಳ ಬಳಿಕ ಗೂಗಲ್ ಸಹ ಮಹತ್ವದ ಸುದ್ದಿಯೊಂದನ್ನು ಹೊರಹಾಕಿದೆ.

ಚಾಟ್‌ಜಿಪಿಟಿಗಿಂತ ಹೆಚ್ಚು ದಕ್ಷತೆಯುಳ್ಳ ಗೂಗಲ್ ಬಾರ್ಡ್ ಎಐ ಚಾಟ್‌ಬಾಟ್ ಪರಿಚಯಿಸುವುದಾಗಿ ಗೂಗಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರ್ ಪಿಚ್ಚೈ ಹೇಳಿದ್ದಾರೆ. ಈಗಾಗಲೇ ಆಯ್ದ ಕೆಲ ಡೆವಲಪರ್‌ಗಳು ಗೂಗಲ್ ಬಾರ್ಡ್ ಚಾಟ್‌ಬಾಟ್ ಬಳಸುತ್ತಿದ್ದು, ಅದರ ಪ್ರಾಯೋಗಿಕ ಪರೀಕ್ಷೆಯಲ್ಲಿ ತೊಡಗಿದ್ದಾರೆ.

## ಏನಿದು ಬಾರ್ಡ್?

'ಮನುಷ್ಯರಂತೆ ಯೋಚಿಸಿ ಪ್ರತಿಕ್ರಿಯಿಸುವ ಸಲುವಾಗಿ ಗೂಗಲ್ ಅಭಿವೃದ್ಧಿಪಡಿಸಿದ ಎಲ್‌ಎಎಂಡಿಎ (LAMDA) ಟೆಕ್ ವ್ಯವಸ್ಥೆ ಆಧರಿಸಿ ಕಂಪನಿಯು 'ಗೂಗಲ್ ಬಾರ್ಡ್' ಚಾಟ್ ಅಭಿವೃದ್ಧಿಪಡಿಸಿದೆ. ಇದೊಂದು ಭಾಷಾ ಮಾದರಿ ಸಂವಾದದ ಅಪ್ಲಿಕೇಷನ್ ಸಿಸ್ಟಂ. ಕೇಳುಗರಿಗೆ (ಚಾಟ್‌ಬಾಟ್‌ನಲ್ಲಿ ವ್ಯವಹರಿಸುವವರಿಗೆ) ಹೊಸದೆನಿಸುವಂತಹ, ನಿಖರ ಮಾಹಿತಿಯ ಹಾಗೂ ಉತ್ತಮಗುಣಮಟ್ಟದ ಪ್ರತಿಕ್ರಿಯೆಗಳನ್ನು ಒದಗಿಸಲು ಇದು ವೆಬ್‌ನಿಂದ ಮಾಹಿತಿ ಸೆಳೆಯುತ್ತದೆ' ಎಂದಿರುವ ಸುಂದರ್ ಪಿಚ್ಚೈ, 'ಚಾಟ್‌ಜಿಪಿಟಿ'ಗೆ ಮಾಡಲು ಸಾಧ್ಯವಿಲ್ಲದ ಅಪ್‌ಡೇಟೆಡ್ ಮಾಹಿತಿಯನ್ನು 'ಗೂಗಲ್ ಬಾರ್ಡ್' ನೀಡಲಿದೆ' ಎಂಬ ಸುಳಿವು ನೀಡಿದ್ದಾರೆ.

ಪಾರ್ಟಿ ಯೋಜಿಸಲು ಸಲಹೆ ನೀಡುವುದರ ಜೊತೆಗೆ ರೆಫ್ರಿಜರೇಟರ್‌ನ ಬಾಗಿಲು ತೆರೆಯದೆ ಅದರಲ್ಲಿರುವ ಆಹಾರದ ಬಗ್ಗೆ ತಿಳಿಯುವಂತಹ ಕೆಲಸವನ್ನು 'ಗೂಗಲ್ ಬಾರ್ಡ್' ಮಾಡಲಿದೆ. ಚಾಟ್‌ಜಿಪಿಟಿ ಹಾಗೂ ಗೂಗಲ್ ಬಾರ್ಡ್‌ನಂತಹ ಚಾಟ್‌ಬಾಟ್‌ಗಳು ಮನುಷ್ಯರ ಸೋಮಾರಿತನ ಹೆಚ್ಚಿಸುವ ಗುಣ ಹೊಂದಿದ್ದರೂ ತಂತ್ರಜ್ಞಾನ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದೆನಿಸಿವೆ. ಬಾಹ್ಯಾಕಾಶ ತಂತ್ರಜ್ಞಾನದಂತಹ ಕ್ಲಿಷ್ಟಕರ ಸಂಗತಿಗಳ ಬಗ್ಗೆ ಮಕ್ಕಳಿಗೆ ಸುಲಲಿತವಾಗಿ ವಿವರಿಸುವ ಕೆಲಸವನ್ನೂ ಗೂಗಲ್ ಬಾರ್ಡ್ ಮಾಡಲಿದೆ. 'ಬಾರ್ಡ್ ಎನ್ನುವುದು ಸೃಜನಶೀಲತೆಯ ತಾಣವಾಗಬಹುದು, ಕುತೂಹಲದ ಲಾಂಚ್‌ಪ್ಯಾಡ್ ಸಹ ಆಗಬಹುದು' ಎಂಬುದು ಪಿಚ್ಚೈ ಮಾತು.

## ಬಾರ್ಡ್ ತಪ್ಪಿಗೆ ಗೂಗಲ್ ತಲ್ಲಣ!

ಚಾಟ್‌ಬಾಟ್ ತಂತ್ರಜ್ಞಾನದಲ್ಲಿನ್ನೂ ಪ್ರಾಯೋಗಿಕ ಹಂತದಲ್ಲಿರುವ ಗೂಗಲ್ ಬಾರ್ಡ್ ಈಚೆಗೆ ಸಣ್ಣ ತಪ್ಪು ಎಸಗಿ ಗೂಗಲ್ ಕಂಪನಿಗೆ ಭಾರಿ ನಷ್ಟವನ್ನುಂಟು ಮಾಡಿದೆ ಎನ್ನಲಾಗಿದೆ. ಈಚೆಗೆ 'ಬಾರ್ಡ್'ನ ಪ್ರಾತ್ಯಕ್ಷಿಕೆಯನ್ನು ಬುಧವಾರ ಗೂಗಲ್ ಆಯೋಜಿಸಿತ್ತು. ಈ ವೇಳೆ ಜೇಮ್ಸ್ ವೆಬ್ ಟೆಲಿಸ್ಕೋಪ್ ಬಗ್ಗೆ ವಿವರಿಸುತ್ತಿದ್ದ ಬಾರ್ಡ್, 'ಜೇಮ್ಸ್ ವೆಬ್ ಟೆಲಿಸ್ಕೋಪ್ ಮೊಟ್ಟಮೊದಲ ಬಾರಿಗೆ ನಮ್ಮ ಸೌರವ್ಯೂಹದ ಹೊರಗಿರುವ ಗ್ರಹವೊಂದರ ಫೋಟೊವನ್ನು ತೆಗೆದಿದೆ' ಎಂದು ಉತ್ತರಿಸಿದೆ.

'ವಾಸ್ತವವಾಗಿ ಇದು ತಪ್ಪು ಉತ್ತರವಾಗಿದ್ದು, ನಾಸಾದ (NASA) ಪ್ರಕಾರ 2004ರಲ್ಲಿ ಹೊರಗ್ರಹದ ಮೊದಲ ಚಿತ್ರವನ್ನು ತೆಗೆಯಲಾಗಿದೆ. ಈ ಉತ್ತರದ ಬಗ್ಗೆ ಗೂಗಲ್ ಬಾರ್ಡ್ ತಪ್ಪಾಗಿ ಹೇಳಿದೆ' ಎಂದು ರಾಯಿಟರ್ಸ್ ವರದಿ ಮಾಡಿತ್ತು. ಈ ಸಣ್ಣ ತಪ್ಪು ಗೂಗಲ್‌ನ ಮಾತೃಸಂಸ್ಥೆ ಆಲ್ಫಾಬೆಟ್‌ನ ಷೇರುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಷೇರು ಮೌಲ್ಯದಲ್ಲಿ ಒಟ್ಟಾರೆ 8.2 ಲಕ್ಷ ಕೋಟಿ ರೂಪಾಯಿಯಷ್ಟು ಕುಸಿತ ಕಂಡಿದೆ. ■

## ಹೊಸ ಐಒಎಸ್

ತನ್ನ ಸಿಇಒ ಟಿಮ್ ಕುಕ್‌ರ ಸಂಬಳದಲ್ಲಿ ಶೇಕಡ 40ರಷ್ಟು ಕಡಿತ ಮಾಡಿ ಹಾಗೂ ಸಾವಿರಾರು ಉದ್ಯೋಗಿಗಳನ್ನು ವಜಾಗೊಳಿಸಿ ಸುದ್ದಿಯಲ್ಲಿದ್ದ ಆ್ಯಪಲ್ ಕಂಪನಿಯು ಈಚೆಗೆ ತನ್ನ ಐಫೋನ್ ಆಪರೇಟಿಂಗ್ ಸಿಸ್ಟಂನ (ಐಒಎಸ್) ಹೊಸ ಆವೃತ್ತಿಯನ್ನು ಪರಿಚಯಿಸಿದೆ.

ಐಒಎಸ್ 16.3 ಅಪ್‌ಡೇಟ್ ಬಿಡುಗಡೆ ಮಾಡಿರುವ ಆ್ಯಪಲ್ ಕಂಪನಿಯು ಇದರಲ್ಲಿ ಹಲವಾರು ಫೀಚರ್‌ಗಳನ್ನು ಪರಿಚಯಿಸಿದೆ. ತುರ್ತು ಎಸ್‌ಒಎಸ್ ಆಯ್ಕೆ ಬಳಸಲು ಸೈಡ್ ಬಟನ್ ಅನ್ನು ಮೂರು ಬಾರಿ ಹಿಂದಿಂದೆ ಒತ್ತಿದರೆ ಸಾಕು. ಮುಂಚೆ ಸೈಡ್ ಬಟನ್ ಮತ್ತು ವಾಲ್ಯೂಮ್ ಬಟನ್ ಎರಡನ್ನೂ ಒತ್ತಿ ಹಿಡಿದರೆ ಮಾತ್ರ ತುರ್ತು ಕರೆಯು ರವಾನೆಯಾಗುತ್ತಿತ್ತು. ಅಥವಾ ಫೇಸ್ ಐಡಿ ಹಾಗೂ ಅಕ್ಸೆಸಿಬಿಲಿಟಿ ಶಾರ್ಟ್‌ಕಟ್ ಆಯ್ಕೆಯನ್ನು ಆನ್ ಮಾಡಿ, ನಂತರ ಸೈಡ್ ಬಟನ್ ಹಾಗೂ ವಾಲ್ಯೂಮ್ ಬಟನ್ ಅನ್ನು ಒಮ್ಮೆ ಒತ್ತಿದರೆ ಸಾಕು ಡಿಸ್‌ಪ್ಲೇಯಲ್ಲಿ ಎಸ್‌ಒಎಸ್ ಆಯ್ಕೆಯು ತೆರೆದುಕೊಳ್ಳುತ್ತದೆ. ನಂತರ ಎಸ್‌ಒಎಸ್ ಆಯ್ಕೆಯನ್ನು ಎಡದಿಂದ ಬಲಕ್ಕೆ ಎಳೆದರೆ ತುರ್ತು ಕರೆ ರವಾನೆಯಾಗುತ್ತದೆ.

ಐಫೋನ್‌ನ ಸೆಟ್ಟಿಂಗ್ ಆಯ್ಕೆಗೆ ಹೋಗಿ. ನಂತರ ಜನರಲ್ ಆಯ್ಕೆಯನ್ನು ಕ್ಲಿಕ್ಕಿಸಿ ಸಾಫ್ಟ್‌ವೇರ್ ಅಪ್‌ಡೇಟ್ ಆಯ್ಕೆಯನ್ನು ತೆರೆದು ಹೊಸ ಐಒಎಸ್ ಅನ್ನು ಡೌನ್‌ಲೋಡ್ ಮಾಡಬಹುದು. ■